

ತಮಿಳು ಮೂಲ: ಸುಬ್ರಹ್ಮಣ್ಯ ಭಾರತಿ
ಕನ್ನಡಕ್ಕೆ: ಎಂ.ಎಸ್.ರಘುನಾಥ್
ಕಲೆ: ಮುರಳೀಧರ್ ರಾಥೋಡ್



# ಕಾಗೆ ಛಂದಸ್ಸು ಕಲಿತ ಕಥೆ

**'ನಮ್ಮ ಕಾಗೆಯ ಭಾಷೆಯಷ್ಟು ದೊಡ್ಡ ಭಾಷೆ ಬೇರೆ ಯಾವುದೂ ಇಲ್ಲ. ನಾನು ಈ ಕಾಡಿನಲ್ಲೇ ಹುಟ್ಟಿದವನಾದುದರಿಂದ, ಈ ಕಾಡಿನ ಬೆಳವಣಿಗೆಗೆ ನನ್ನ ಕೈಲಾದ ಕೊಡುಗೆ ನೀಡುತ್ತೇನೆ. ನಮ್ಮ ಕಾಗೆಯ ಭಾಷೆಯನ್ನು ರೂಪಿಸಿ, ಕಾವ್ಯದ ಅಭಿವ್ಯಕ್ತಿಗೆ, ಅದನ್ನು ಅಭಿವೃದ್ಧಿ ಪಡಿಸಬೇಕೆಂದು ನಿರ್ಧರಿಸಿದ್ದೇನೆ.' ಎಂದು ಆ ಕಾಗೆ ತನ್ನ ಹೆಂಡತಿಗೆ ಹೇಳಿತು.**

ಕುಟ್ರಾಲಂಗೆ ಹತ್ತಿರದ ಒಂದು ಬೆಟ್ಟದ ಮೇಲೆ ಬೃಹತ್ ಆಲದ ಮರವಿತ್ತು. ಒಂದು ಸಂಜೆ ದುಃಖಭರಿತ ಕಾಗೆಯೊಂದು ಅದರ ರೆಂಬೆಯೊಂದರ ಮೇಲೆ ಕುಳಿತಿತ್ತು. ಕಾಗೆಯ ಹೆಂಡತಿ ತನ್ನ ಪತಿಯ ಹತ್ತಿರ ಬಂದು ಆತ್ಮೀಯವಾದ ಧ್ವನಿಯಲ್ಲಿ ಕೇಳಿತು, 'ಯಾಕೆ, ಏನು ಚಿಂತೆ?'

'ಇಂದು ಬೆಳಗ್ಗೆ ನಾನು ಪ್ರತಿದಿನ ತಿನ್ನುವುದಕ್ಕಿಂತ ಹೆಚ್ಚಾಗಿಯೇ ತಿಂದುಬಿಟ್ಟೆ. ಈಗ ನಾನು ಆಹಾರದ ಬೇಟೆಗೆ ಹೋಗುವ ಅವಶ್ಯಕತೆಯಿಲ್ಲ. ಆದರೆ, ನನಗೆ ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಾಗುತ್ತಿಲ್ಲ. ನನ್ನ ಗೆಳೆಯರು ಕೂಡ ಹುಡುಕಾಟಕ್ಕೆ ಹೋದವರು ಇನ್ನೂ ಬಂದಿಲ್ಲ. ಅವರು ಇಲ್ಲಿ ಇದ್ದಿದ್ದರೆ ಅವರೊಂದಿಗೆ ಹರಟೆ ಹೊಡೆಯುತ್ತಾ ಕಾಲ ಕಳೆಯಲು ಚೆನ್ನಾಗಿರುತ್ತಿತ್ತು. ನಾನು ಆಕಾಶದಲ್ಲಿ ಹಾರಾಡುತ್ತಾ ಕೆಳಗಿನ ದೃಶ್ಯಗಳನ್ನು ನೋಡಿ ಖುಷಿಪಡೋಣವೆಂದುಕೊಂಡೆ. ಆದರೆ, ನನ್ನ ರೆಕ್ಕೆಗಳು, ಕಾಲುಗಳು, ದೇಹ ಮತ್ತು ತಲೆ ಬಹಳ ಭಾರವಾಗಿ ನೋಯುತ್ತಿದೆ. ನನಗೆ ಜ್ವರ ಬಂದಿರಬೇಕು. ನನ್ನ ಗಂಟಲೂ ಸಹ ಕಟ್ಟಿ ತಡೆಯಲಾರದ ನೋವುಂಟಾಗುತ್ತಿದೆ. ಬಹಳ ನೆಗಡಿಯೂ ಇದೆ. ನೆನ್ನೆ ಮತ್ತು ಮೊನ್ನೆ ಹತ್ತಿರದ ಕಾಡಲ್ಲಿ ತಿನ್ನಲು ಹೆಚ್ಚು ಸಿಗಲಿಲ್ಲ. ಹಾಗಾಗಿ, ಪೂರ್ವದ ಕಡೆ ಬಹಳ ದೂರ, ಹೆಚ್ಚು ಜನ ಸಂದಣಿ ಇರುವ ಕಡೆ, ಆಹಾರ ಹುಡುಕಿಕೊಂಡು ಹಾರಬೇಕಾಯಿತು. ಆದರೂ ಸೂರ್ಯ ಮುಳುಗುವವರೆಗೆ ನನಗೆ ಅರ್ಧ ಹೊಟ್ಟೆಯೂ ತುಂಬುವಷ್ಟು ತಿನ್ನಲು ಸಿಗಲಿಲ್ಲ. ರಾತ್ರಿ ಬೆಳಗ್ಗೆ ಎಲ್ಲಾ ಒಂದೇ ಸಮನೇ ಮಳೆ. ಬೇಸಿಗೆ ಮಳೆಯಾದ್ದರಿಂದ ನಾನು ಮೂಳೆಯವರೆಗೆ ನೆಂದುಹೋದೆ. ನನ್ನ ಆರೋಗ್ಯ ಕೆಡಲು ಇದೇ ಕಾರಣವಿರಬಹುದು. ಅದರೊಂದಿಗೆ ಬೆಳಗ್ಗೆಯಿಂದ ಅಜೀರ್ಣ ಬೇರೆ. ಕಾಲ ಕಳೆಯುವುದು ಹೇಗೆಂದು ಗೊತ್ತಾಗುತ್ತಿಲ್ಲ. ಅದಕ್ಕೆ ನಾನು ದುಃಖದಲ್ಲಿದ್ದೇನೆ.'

ಆ ಕಾಗೆಯ ಹೆಂಡತಿ ಹೇಳಿದಳು, 'ಕೆಲವು ವರ್ಷಗಳ ಹಿಂದೆ ನೀನು ನನ್ನನ್ನು ಮದುವೆಯಾದಾಗ, ನನ್ನ ಬಳಿ ಮಾತನಾಡುವುದಕ್ಕಿಂತ ಹೆಚ್ಚು ಖುಷಿ ಪಡುವುದು ಮತ್ತೇನು ಇಲ್ಲ ಎಂದೆಲ್ಲಾ ಹೇಳಿದ್ದೆ. ನನ್ನ ಜೊತೆ ಕಳೆಯುವ ಕಾಲವೆಲ್ಲಾ ಬಹಳ ಫಲಪ್ರದ ಎಂದು ಹೇಳಿದ್ದೆ. ಈ ಮಾತನ್ನು ಮತ್ತೆ ಮತ್ತೆ ಹೇಳಿದ್ದು ಚೆನ್ನಾಗಿ ನೆನಪಿದೆ. ಆದರೆ, ಈಗ ನಾನು ನಿನ್ನ